# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

## ಸಿ.ಸಿ. ನಂ.173/2024

| | | |
|---|---|---|
| ಸಾಕ್ಷಿದಾರರ ಹೆಸರು | ಡಾಃ ವಿಕ್ರಮ್ | ಸಿ.ಡಬ್ಲ್ಯು–6 |
| ತಂದೆಯ ಹೆಸರು | ವಿಷ್ಣು ಆರ್ | ಪಿ .ಡಬ್ಲ್ಯೂ–3 |
| ವಯಸ್ಸು | 39 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಹಿರಿಯ ತಜ್ಞರು, ಉಪ ವಿಭಾಗೀಯ ಆಸ್ಪತ್ರೆ, ಸಾಗರ | ದಿನಾಂಕಃ |
| ವಾಸಃ | ಸಾಗರ | 13.05.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ನಾನು ಮೇ 2018 ರಿಂದ ಸಾಗರದ ಉಪ ವಿಭಾಗೀಯ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದೇನೆ.

**2.** ದಿನಾಂಕ 18.01.2024 ರಂದು ಕರ್ತವ್ಯದ ಮೇಲೆ ಇದ್ದಾಗ ಚಾ.ಸಾ 1 ರವರು ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ಸದರಿ ಚಾ.ಸಾ 1 ರವರ ದೇಹದ ಭಾಗಗಳಲ್ಲಿ ನೋವು ಇರುವುದಾಗಿ ನನಗೆ ಅವರು ತಿಳಿಸಿದರು. ನಾನು ಪರಿಶೀಲನೆ ಮಾಡಿದಂತೆ ಅವರ ದೇಹದ ಮೇಲೆ ಯಾವುದೇ ಬಾಹ್ಯ ಗಾಯಗಳು ಕಂಡು ಬಂದಿಲ್ಲ. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದವು. ಈ ಕುರಿತು ನಾನು ತನಿಖಾಧಿಕಾರಿಗಳಿಗೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ–8 ಎಂದು, ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು. ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ಕೈ ಮತ್ತು ಕೋಲಿನಿಂದ ಹೊಡೆದಾಗ ನಿಪಿ–8 ರಲ್ಲಿ ಹೇಳಿದಂತಹ ನೋವು ಆಗುವ ಸಾಧ್ಯತೆ ಇದೆ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ವಿ.ಎಸ್ ರವರಿಂದಃ–**

**1.** ಒಬ್ಬ ವ್ಯಕ್ತಿ ತನಗೆ ನೋವು ಇದ್ದ ಹಾಗ ನಟನೆ ಮಾಡಬಹುದು ಎಂದರೆ ಸರಿ. ಕೋಲಿನಿಂದ ಹೊಡೆದಾಗ ಗಾಯವು ಕೆಂಪಾಗಿ ರಕ್ತ ಹೆಪ್ಪುಗಟ್ಟಿದಂತೆ ಕಾಣುತ್ತದೆ ಎಂದರೆ, ಇರಬಹುದು, ಆದರೆ ಕಡ್ಡಾಯವಾಗಿ ರಕ್ತ ಹೆಪ್ಪುಗಟ್ಟುವ ಅಗತ್ಯ ಇಲ್ಲ ಎನ್ನುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.